ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಕೊಡಗು ಜಿಲ್ಲೆಯಲ್ಲಿ ಕೂಡ ಇದೆ ದೊಡ್ಡ ಪ್ರಾಬ್ಲಮ್ ಇದೆ.

ಶ್ರೀ ಕೆ.ಜಿ. ಕುಮಾರಸ್ವಾಮಿ: ಮಲೆನಾಡು ಭಾಗದಲ್ಲಿ ಸುಮಾರು ಕಡೆ ಮನೆಯನ್ನು ಕಟ್ಟಿಕೊಂಡು ಬಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಂದಾಯ ಸಚಿವರಿಗೆ ತಿಳಿಸಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದಾರೆ. ನೋಡೋಣ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಸಂಬಂಧಪಟ್ಟ ಸಚಿವರಿಂದ ಮಾಹಿತಿ ಕೊಡಿಸುತ್ತೇನೆಂದು ಹೇಳಿದ್ದಾರೆ, ನಮಗೆ ಇದನ್ನು ಪರಿಹರಿಸಿ ಕೊಡಬೇಕು.

ಅಧ್ಯಕ್ಷರು: ಪರಿಹಾರ ಮಾಡಬೇಕೆಂದು ಸೂಚನೆಯನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆ, ಇದರ ವ್ಯಾಪ್ತಿಯನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಇವತ್ತು ಅವರು ಕೊಟ್ಟಿದ್ದಾರೆ ವಿವರವನ್ನು ತರಿಸಿಕೊಂಡು ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು: ಆಯಿತು.

ಇ) ವಿಷಯ: ತುರುವೇಕೆರೆ ತಾಲ್ಲೂಕಿನಲ್ಲಿ ಸಂಪೂರ್ಣ ರಸ್ತೆ ಹಾಳಾಗಿ ಖಾಸಗಿ ಮತ್ತು ಸರ್ಕಾರಿ ಬಸ್ಸಿನ ಮಧ್ಯೆ ಅಪಘಾತವಾಗಿ ಸುಮಾರು 4 ಜನ ಸ್ಥಳದಲ್ಲಿಯೇ ಸತ್ತಿರುವ ಬಗ್ಗೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೂಕಿನಲ್ಲಿ ಖಾಸಗಿ ಮತ್ತು ಸರ್ಕಾರಿ ಬಸ್ಸಿನ ಮಧ್ಯೆ accident ಆಗಿ ಸುಮಾರು 4 ಜನ ಸ್ಥಳದಲ್ಲಿಯೇ ಸತ್ತಿದ್ದಾರೆ. ಇನ್ನು 6 ಜನ Hospital ಗೆ ಸೇರಿಕೊಂಡಿದ್ದಾರೆ. ಅವರ ಪರಿಸ್ಥಿತಿ ಕೂಡ ತೀವ್ರ ಗಂಭೀರವಾಗಿದೆ. ಕಾರಣವೇನೆಂದರೆ, ಹೆಚ್ಚು ಮಳೆಯಾಗಿ ಸಂಪೂರ್ಣ ರಸ್ತೆ ಹಾಳಾಗಿರುವುದರಿಂದ ಇಂತಹ accident ಗಳು ನಿರಂತರವಾಗಿ ನಡೆಯುತ್ತಿವೆ. ಹಾಗಾಗಿ ನಿನ್ನೆ ಕೂಡ ನಾನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮುಂದೆ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ವಿಶೇಷವಾಗಿ ಈ ರಸ್ತೆ ರಿಪೇರಿ ಆಗದಿದ್ದರೆ ಹೆಚ್ಚು ಹೆಚ್ಚು accident ಆಗಿ ಜನ ಸಾಯುವ ಸ್ಥಿತಿಯಲ್ಲಿದ್ದಾರೆ. ಈಗಾಗಲೇ ಬಹಳಷ್ಟು ಜನ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ನಿರಂತರವಾಗಿ strike ಮಾಡುತ್ತಿದ್ದಾರೆ. ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು strike ಮಾಡುತ್ತಿದ್ದಾರೆ. ರಸ್ತೆ ಹಾಳಾಗಿರುತ್ತದೆ. ಈಗಾಗಲೇ ಸತ್ತವರಿಗೆ KSRTC ಯವರು 50,000 ಸಾವಿರ

ರೂ.ಗಳನ್ನು ಪರಿಹಾರವಾಗಿ ಕೊಟ್ಟಿದ್ದಾರೆ. ಅಲ್ಲಿ Hospital ದಲ್ಲಿರುವವರಿಗೆ ಪರಿಹಾರವನ್ನು ಕೊಡಬೇಕು. ಏಕೆಂದರೆ ಎಲ್ಲರೂ ಬಡ ಕೂಲಿ ಕಾರ್ಮಿಕರಿದ್ದಾರೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಕೊನೆಯ ಪಕ್ಷ ಆ ರಸ್ತೆ ರಿಪೇರಿ ಮಾಡಲಿಕ್ಕೆ 20 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ವಿ. ಸೋಮಣ್ಣ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಿನ್ನೆ ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ನಾವು ಕೂಡ ಹಲವಾರು ಸಲ ಈ ರಸ್ತೆಯ ಬಗ್ಗೆ ಚರ್ಚಿಸಿದ್ದೇವೆ. ಪ್ರಕೃತಿಯಿಂದ ಬಹಳಷ್ಟು ಅನಾನುಕೂಲವಾಗಿದೆ. ಒಂದು ಸಂತೋಷ ಕಾಂಗ್ರೆಸ್ ಮತ್ತು ಬಿಜೆಪಿಯವರು strike ಮಾಡಿದ್ದಾರೆ, ನಾನೊಬ್ಬ ಇದ್ದೇನೆಂದು ಹೇಳಿದ್ದಾರೆ. ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ರಸ್ತೆಗಳು ಏನಿದೆ, ನಾನು ಕೂಡ ಓಡಾಡಿದ್ದೇನೆ. ಈಗಾಗಲೇ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಉಳಿದ ರಸ್ತೆಗಳನ್ನು ಆದ್ಯತೆ ಮೇಲೆ ತೆಗೆದುಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಯಾವಾಗ ತೆಗೆದುಕೊಳ್ಳುತ್ತಾರೆನ್ನುವ ಬಗ್ಗೆ ಕಾಂಕ್ರೀಟಾಗಿ ದಿನಾಂಕ ಹೇಳಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬಹಳಷ್ಟು accident ಗಳಾಗುತ್ತವೆ.

ಅಧ್ಯಕ್ಷರು: ಇದು ಶೂನ್ಯವೇಳೆ ಇರುತ್ತದೆ.

ಈ) ವಿಷಯ: ಹೈದ್ರಾಬಾದ್– ಕರ್ನಾಟಕ ಸಂವಿಧಾನ ಅನುಚ್ಛೇದ–371ರ ಅಡಿಯಲ್ಲಿ ತಿದ್ದುಪಡಿ ಮಾಡಿ ಆ ಭಾಗಕ್ಕೆ ಪ್ರತ್ಯೇಕ ಸ್ಥಾನಮಾನ ನೀಡುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ಹೈದ್ರಾಬಾದ್–ಕರ್ನಾಟಕ ಸಂವಿಧಾನ ಅನುಚ್ಛೇದ–371ರ ಅಡಿಯಲ್ಲಿ ತಿದ್ದುಪಡಿ ಮಾಡಿ ಆ ಭಾಗಕ್ಕೆ ಪ್ರತ್ಯೇಕ ಸ್ಥಾನಮಾನ ನೀಡುವ ಬಗ್ಗೆ, ಈಗಾಗಲೇ ವಿಧಾನಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿದ್ದು, ಈ ವಿಷಯವು ಇತ್ತೀಚೆಗೆ ರಾಜ್ಯಸಭೆಯಲ್ಲಿ ಚರ್ಚೆಯಾಗಿದ್ದು, ಆ ಚರ್ಚೆಯ ಸಂದರ್ಭದಲ್ಲಿ ಕೇಂದ್ರ ಗೃಹ ಮಂತ್ರಿಗಳು ಈ ಒಂದು ಸ್ಥಾನಮಾನವನ್ನು ನೀಡಲು ಸಾಧ್ಯವಾಗುವುದಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಿರುತ್ತಾರೆ. ಈ ಒಂದು ಹೇಳಿಕೆಯಿಂದ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಧರಣಿ–ಬಂದ್‌ಗಳನ್ನು ಆಚರಿಸಿ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಪರಿಸ್ಥಿತಿ ಆ ಭಾಗದಲ್ಲಿ ಕೈಮೀರಿ ಹೋಗುತ್ತಿದ್ದು ಕಾನೂನು ಪರಿಸ್ಥಿತಿಯೂ ಕೂಡ ಹದಗೆಡುತ್ತಿದೆ. ಆದುದರಿಂದ